ಶ್ರೀ ಟಿ ಎಂ. ಮಂಜುನಾಥ್.—ಯಾವ ಜನರು ಆ ರೀತಿ ಇಲ್ಲಿ ವಿರೋಧ ಮಾಡಿದ್ದಾರೆ ? ಇದನ್ನು ಏಕೆ ಕೈ ಬಿಟ್ಟಿದ್ದೀರಿ ?

ಶ್ರೀ ಕೆ ಎಚ್. ಪಾಟೀಲ್ —ಈ ಸದನದಲ್ಲಿ ಮಾತನಾಡುವಾಗ ನಿಯಂತ್ರಣವನ್ನು ಕಡಿಮೆ ಮಾಡ ಬೇಕೆಂದು ಬಹುಜನ ಸದಸ್ಯರು ಮಾತನಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಲ್ಲಿ ಆ ರೀತಿ ಮಾತನಾಡಲಿಲ್ಲ.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರು ಪ್ರಶ್ನೆ ಕೇಳಬೇಕು.

ಶ್ರೀ ಕೊಣಂದೂರು ಲಿಂಗಪ್ಪ.—ಮಾನ್ಯ ಸಚಿವರು ಈ ಸಭೆಯನ್ನೂ ಮತ್ತು ಜನತೆಯನ್ನೂ ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಸಗಟು ವ್ಯಾಪಾರವನ್ನು ಕ್ರಮಬದ್ಧವಾಗಿ ನಡೆಸ ಬೇಕೆಂದು ಹೇಳುವವರು ನಾವು. ಆದರೂ ಕೇಂದ್ರ ಸರ್ಕಾರದವರು ಆದನ್ನು ಕೈ ಬಿಟ್ಟಿದ್ದಾರೆ. ಆದ್ದ ರಿಂದ ಇವತ್ತು ಸಗಟು ವ್ಯಾಪಾರವನ್ನು ಸರ್ಕಾರದವರೇ ತೆಗೆದುಕೊಂಡು ಕ್ರಮಬದ್ಧವಾಗಿ ಮಾಡಬೇಕೆಂದು ನನ್ನ ಸಲಹೆ.

Rise in prices of foodgrains

232. SRI K. PRABHAKAR (Varthur).—

Will the Minister for Food and Forest be pleased to state.—

(*a*) the main reason for the rapid spurt in prices of foodgrains in the State ;

(*b*) the efforts made by the Government to check such rise in prices ;

(*c*) the periodical rise in prices of first quality rice and first quality of ragi once in five years from 1950 to 1955, 1955 to 1960, 1960 to 1965, 1965 to 1970, 1970 to 1974 etc.,

SRI K. H PATIL (Minister for Food and Forests).—

(*a*) The following are among the causes for the rapid rise in prices of foodgrains in the State and the rest of the country in recent months.—

1. The General inflation in the economy of the country.

2. Increase in the cost of transport consequent on the steep hike in the prices of petrol/diesel.

3. Increased procurement prices and consequent increase in the issue price of rise, wheat, etc., supplied through Government Fair Price Shops.

4. Production not keeping pace with the increase in population.

(*b*) A larger percentage of the marketable surplus has been procured under the levy system to issue more grains to existing Informal Rationing Areas and to the new areas to be covered in stages. Through the mechanism of interdistrict movement control the supply of rice in the free market is regulated. Dehoarding measures are taken periodically to bring out hoarded stocks and make them available for distribution.

(*c*) Statement appended.

STATEMENT

Showing the State average Price of Rice (fine) and ragi from 1954 to 1973.

(Compiled by the Chief Marketing officer)

Sl. No.	Year	Unit in Quintals	Rice (Fine)	Ragi
1.	1950 to 1953	Information not		
2,	1954	available Per Qtl.,	56-00	30-00
3.	1955	,,	44-00	22-00
4.	1956	,,	51-00	23-00
5.	1957	,,	59-20	31-94
6.	1958	,,	61-25	31-71
7.	1959	,,	65-54	35-88
8.	1960	,,	69-60	41-24
9.	1961	,,	72-27	32-09
10.	1962	,,	73-24	36-28
11.	1963	,,	70-06	36-37
12.	1964	,,	80-87	49-74
13.	1965	,,	114 59	75-30
14.	1966	,,	113-38	92-39
15.	1967	,,	142-28	88-04
16.	1968	,,	149-30	86-03
17.	1969	,,	146-16	76-32
18.	1970	,,	133-78	68-22
19.	1971	,,	139-83	70-42
20.	1972	,,	156-78	77-92
21.	1973	,,	211-52	119-63
22.	1974	,	235-00	127-00

ಶ್ರೀ ಕೆ. ಪ್ರಭಾಕರ್.—(ಅ) ಪ್ರಶ್ನೆಗೆ ಉತ್ತರವಾಗಿ ರಾಜ್ಯದಲ್ಲಿ ಹಾಗೂ ರಾಷ್ಟ್ರದ ಇತರ ಭಾಗಗಳಲ್ಲಿ ಆಹಾರ ಧಾನ್ಯಗಳ ಬೆಲೆಗಳು ತೀವ್ರವಾಗಿ ಹೆಚ್ಚಿರುವುದಕ್ಕೆ ಕೆಲವು ಕಾರಣಾಂಶಗಳನ್ನು ಕೊಟ್ಟಿದ್ದೀರಿ. ವಿಶೇಷವಾಗಿ ಬಡವರು ತಿನ್ನತಕ್ಕ ರಾಗಿ, ಜೋಳ ಇತ್ಯಾದಿ ಸಾಮಾನುಗಳ ಬೆಲೆಗಳನ್ನು ಸಬ್ಸಿಡೈಜ್ ಮಾಡಿ ಕೇರಳ ಸರ್ಕಾರದಲ್ಲಿದ್ದ ಹಾಗೆ ನಮ್ಮ ಸರ್ಕಾರದವರು ಮಾಡಲು ಯೋಚನೆ ಮಾಡುತ್ತಾರೆಯೇ ?

† ಶ್ರೀ ಕೆ. ಎಚ್. ಪಾಟೀಲ್.—ಸದ್ಯಕ್ಕೆ ಆ ವಿಚಾರ ಸರ್ಕಾರದ ಗಮನದಲ್ಲಿಲ್ಲ.

ಶ್ರೀ ಕೆ. ಪ್ರಭಾಕರ್.—ಈಗ ಸರ್ಕಾರದ ವಶದಲ್ಲಿರತಕ್ಕ ರಾಗಿ ೧೯೭೪ನೇ ವರ್ಷದ ಆಂಕಿ ಅಂಶದ ಪ್ರಕಾರ ಒಟ್ಟು ಎಷ್ಟು ಕ್ವಿಂಟಾಲ್ ಇದೆಯೆಂಬುದನ್ನು ಹೇಳುತ್ತೀರಾ

ಶ್ರೀ ಕೆ. ಎಚ್. ಪಾಟೀಲ್.—೨೫೯ ಟನ್ನುಗಳು.

ಶ್ರೀ ಕೆ. ಪ್ರಭಾಕರ್.—ಈಗ ಸರ್ಕಾರದ ವಶದಲ್ಲಿರುವಷ್ಟು ರಾಗಿಯೂ ಸರ್ಕಾರದ ವಶದಲ್ಲಿದೆಯೋ ಅಥವಾ ಯಾವುದಾದರೂ ಡಿಪೋಗಳಲ್ಲಿ ಸ್ಟಾಕ್ ಇದೆಯೋ ?

ಶ್ರೀ ಕೆ. ಎಚ್. ಪಾಟೀಲ್.—ಯಾವ್ಯಾವ ಡಿಪೋಗಳಲ್ಲಿ ಎಷ್ಟೆಷ್ಟು ಈಗ ಇದೆಯೋ ಅವನ್ನು ಆಯಾ ಭಾಗದಲ್ಲಿ ಹಂಚಲು ವ್ಯವಸ್ಥೆ ಮಾಡಿದೆ. ಇನ್ನೂ ಸ್ವಲ್ಪ ಸ್ಟಾಕ್ ಸರ್ಕಾರದ ವಶದಲ್ಲಿದೆ

ಶ್ರೀ ಬಿ. ಇ. ರಾಮಯ್ಯ. - (ಆ) ಪ್ರಶ್ನೆಗೆ ಉತ್ತರವಾಗಿ ಆಹಾರ ಧಾನ್ಯಗಳ ಬೆಲೆಗಳು ತೀವ್ರವಾಗಿ ಹೆಚ್ಚಿರುವುದಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಉತ್ಪಾದನೆ ಹೆಚ್ಚಾಗದೆ ಇರುವುದು ಎಂಬುದಾಗಿ ಹೇಳಿದೆ. ಆಂದಮೇಲೆ ಉತ್ಪಾದನೆ ಹೆಚ್ಚಾಗದೆ ಇರುವುದಕ್ಕೆ ಅಡಚಣೆ ಏನಿದೆ ? ಆ ರ ಬಗ್ಗೆ ಸರ್ಕಾರದವರು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಕೆ. ಎಚ್. ಪಾಟೀಲ್.—ಉತ್ಪಾದನೆ ಹೆಚ್ಚು ಮಾಡಬೇಕಾದರೆ ರೈತನಾಗಿರುವವನು ಹೆಚ್ಚಿಗೆ ಕಷ್ಟಪಟ್ಟು ಕೆಲಸ ಮಾಡಬೇಕು. ಅವನಿಗೆ ಈಗಾಗಲೇ ಸರ್ಕಾರ ತನ್ನ ಶಕ್ತಿಮೀರಿ ಎಲ್ಲ ಸೌಲಭ್ಯಗಳನ್ನು ಕೊಡುತ್ತಿದೆ. ಗೊಬ್ಬರ ತರುವುದಕ್ಕೋಸ್ಕರವಾಗಲೀ, ನಿರಾವರಿ ಸೌಕರ್ಯಗಳನ್ನು ಒದಗಿಸುವುದಕ್ಕಾಗಲೀ ಸರ್ಕಾರದಲ್ಲಿ ಎಷ್ಟೋ ಕೋಟಿ ಫೈನಾನ್ಸ್ ಪ್ರೊಜೆಕ್ಷನ್ ಇದ್ದರೂ ಅದನ್ನು ಮರೆತು ಅವರಿಗೆ ಸಹಾಯ ಮಾಡಲಿಕ್ಕೆ ಸರ್ಕಾರ ಹತ್ತಿದೆ ಗೊಬ್ಬರ ಎಷ್ಟು ನಿರೀಕ್ಷಣೆ ಮಾಡುತ್ತಿದ್ದೇವೋ ಅಷ್ಟು ಬರಲಿಕ್ಕೆ ಅನೇಕ ಪ್ರಚಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ. ಇ. ರಾಮಯ್ಯ. - ದಿನದಿನವೂ ಬೆಲೆಗಳ ಏರಿಕೆ ಶೇ ಅಥವಾ ಗರಿಷ್ಟ ಜಾಸ್ತಿಯಾಗುತ್ತಿದೆ ಯೆಂಬುದನ್ನು ತಮಗೆ ಈಗಾಗಲೇ ವೇದ್ಯವಾಗಿದೆ. ಆದ್ದರಿಂದ ವರ್ತಕರು ಎಲ್ಲಿಲ್ಲಿ ಕಳ್ಳದಾಸ್ತಾನು ಮಾಡಿದ್ದಾರೋ ಅವನ್ನು ಪತ್ತೆಹಚ್ಚಲು ಇನ್ನೂ ಹೆಚ್ಚಿನ ಶಿಬ್ಬಂದಿಯನ್ನು ಸರ್ಕಾರದವರು ಏರ್ಪಾಡು ಮಾಡಿ, ಅವನ್ನೆಲ್ಲಾ ತಮ್ಮ ಹತೋಟಿಗೆ ತೆಗೆದುಕೊಂಡರೆ, ಬಡವರಿಗೆ ಅನುಕೂಲವಾಗುವುದಿಲ್ಲವೇ ? ಆದರಿಂದ ಬಡವರಿಗೂ ಸಹ ಸುಲಭದರದಲ್ಲಿ ಆಹಾರ ಪದಾರ್ಥಗಳು ದೊರಕುವುದಿಲ್ಲವೇ ? ಈಗಲಾದರೂ ಬಡವರಿಗೆ ಸುಲಭ ಬೆಲೆಗೆ ಆಹಾರ ಪದಾರ್ಥಗಳನ್ನು ಸರ್ಕಾರ ಕೊಡಿಸುವ ಯೋಜನೆ ಮಾಡುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಈಗಾಗಲೇ ಸರ್ಕಾರ ಆ ಕಾರ್ಯಮಾಡುವುದಕ್ಕೆ ಹತ್ತಿದೆ. ಬರೀ ಹೆಚ್ಚಿನ ಸಿಬ್ಬಂದಿ ಇದ್ದರೆ ಏನೂ ಆಗುವುದಿಲ್ಲ. ಮಾನ್ಯ ಸದಸ್ಯರ ಸಹಕಾರ ಇದಕ್ಕೆ ಅಗತ್ಯವಾಗಿ ಬೇಕಾಗಿದೆ. ಎಲ್ಲಿಯಾದರೂ ಕಳ್ಳದಾಸ್ತಾನು ಆಗುತ್ತಿದ್ದರೆ ಆಂಥಾದ್ದನ್ನು ನನಗೆ ಗುಪ್ತವಾಗಿಯಾಗಲೀ ಅಥವಾ ಬಹಿರಂಗವಾಗಿಯಾಗಲೀ ತಿಳಿಸಿದರೆ, ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ಈಗ ಬಡವರು ಜೀವನ ಮಾಡುವುದೇ ಬಹಳ ಕಷ್ಟ ಆದರಲ್ಲಿಯೂ ನಮ್ಮ ಎನ್.ಜಿ.ಓ.ಗಳಿಗೂ ಬಹಳ ತೊಂದರೆಯಾಗಿದೆ. ಧಾರಣೆವಾಸಿಗಳ ಬೆಲೆ.....

ಶ್ರೀ ಕಾಗೋಡು ತಿಮ್ಮಪ್ಪ.—ಬಡವರಿಗೆ ಕಷ್ಟವೆಂಬುದು ಎಂದಿನಿಂದ ಗೊತ್ತಾಯಿತು ?

ಶ್ರೀ ಕೊಣಂದೂರು ಲಿಂಗಪ್ಪ.—ಶ್ರೀಮತಿ ಇಂದಿರಾ ಗಾಂಧಿಯವರ ರಾಷ್ಟ್ರದಲ್ಲಿ ಬಡವರು ಎಲ್ಲಿದ್ದಾರೆ ?

ಶ್ರೀ ಕೆ. ಪ್ರಭಾಕರ್.—ಧಾರಣೆವಾಸಿಗಳ ಬೆಲೆ ಜಾಸ್ತಿ ಇರುವುದರಿಂದ ನಾವು ಎಷ್ಟೇ ತುಟ್ಟಿಭತ್ಯವನ್ನು ಎನ್.ಜಿ.ಓ.ಗಳಿಗೆ ಕೊಟ್ಟರೂ ಕೂಡ ಅವರಿಗೆ ಅದರಿಂದೇನೂ ಪ್ರಯೋಜನವಾಗದೇ ಇರುವುದರಿಂದ ಅವರಿಗೆ ಜೀವನ ಮಾಡುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಆದ್ದರಿಂದ ಆಹಾರ ಪದಾರ್ಥಗಳ ಬೆಲೆ ಏರಿಕೆಯ ಬಗ್ಗೆ ಸರ್ಕಾರದವರು ಒಂದು ಸೀರಿಯಸ್ ವ್ಯೂ ತೆಗೆದುಕೊಂಡು ಯಾವುದಾದರೂ ಒಂದು ರೀತಿಯಲ್ಲಿ ಯೋಚನೆ ಮಾಡಿ ಆದಕ್ಕೆ ಸಬ್ಸಿಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು.—ಅದರ ಬಗ್ಗೆ ಈಗಾಗಲೇ ಮಂತ್ರಿಗಳು ಉತ್ತರ ಹೇಳಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಮಾರ್ಕೆಟ್ ದರಗಳು ಅತಿ ಹೆಚ್ಚಾಗದಂತೆ ನೋಡಿಕೊಳ್ಳುವುದಕ್ಕೆ ಈಗಾಗಲೇ ಸರ್ಕಾರ ಪ್ರಯತ್ನ ಮಾಡುತ್ತಿದೆ. ಸರ್ಕಾರ ತೆಗೆದುಕೊಂಡ ಪ್ರೊಕ್ಯೂರ್‌ಮೆಂಟ್ ಸ್ಟಾಕ್ ಸರಿಯಾಗಿ ಬಡವರಿಗೆ ವಿತರಣೆಯಾಗುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ಆದರಲ್ಲಿಯೂ ವಲ್ನರಬಲ್ ಸೆಕ್ಷನ್ನಿಗೆ ಹೆಚ್ಚಿಗೆ ತೆರಿಗೆ ಬೀಳದ ಹಾಗೆ ಇದರಿಂದ ಹೆಚ್ಚು ಬಡವರಿಗೇ ಅನುಕೂಲವಾಗುವ ದೃಷ್ಟಿಯಿಂದ ಅನೇಕ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ.